# ಆ್ಯಂಟಿಬಯೊಟಿಕ್ಸ್: ಅಪಾಯ ಅರಿಯಬೇಕಿದೆ

ವೈದ್ಯರ ಶಿಫಾರಸು ಇಲ್ಲದೆ ಆ್ಯಂಟಿಬಯೊಟಿಕ್ಸ್‌ಗಳನ್ನು ಮಾರಾಟ ಮಾಡುವಂತೆ ಇಲ್ಲ ಎಂದು ನಿಯಮ ಹೇಳುತ್ತದೆ. ಆದರೆ, ಈ ನಿಯಮಗಳು ಕಟ್ಟುನಿಟ್ಟಾಗಿ ಪಾಲನೆ ಆಗುತ್ತಿಲ್ಲ. ನಿಯಮಗಳ ಬಗ್ಗೆ ಜನಸಾಮಾನ್ಯರಲ್ಲಿ ಹೆಚ್ಚಿನ ಅರಿವು ಇದ್ದಂತಿಲ್ಲ. ಇದರಿಂದಾಗಿ, ಪ್ರತಿಜೈವಿಕಗಳ ಅನಿಯಂತ್ರಿತ ಬಳಕೆಯ ಅಪಾಯವು ದಿನೇ ದಿನೇ ಹೆಚ್ಚಾಗತೊಡಗಿದೆ.

ಅತಿಯಾದರೆ ಅಮೃತವೂ ವಿಷ ಎಂಬ ಮಾತಿದೆ. ನಾವು ಸೇವಿಸುವ ಆಹಾರ, ಬಳಸುವ ಔಷಧಗಳ ವಿಚಾರಕ್ಕೂ ಈ ಮಾತು ಅನ್ವಯಿಸುತ್ತದೆ. ಗಂಟಲು ಗರಗರ ಎಂದರೂ ಔಷಧ ಬೇಕು, ನೆಗಡಿಯಾದರೂ ಔಷಧ ಬೇಕು. ಕೆಲವರಿಗೆ ದಪ್ಪಗಾಗಲಿಕ್ಕೆ ಔಷಧ ಬೇಕು, ಮತ್ತೆ ಕೆಲವರಿಗೆ ತೆಳ್ಳಗಾಗಲಿಕ್ಕೆ ಬೇಕು. ಔಷಧಗಳು ಈಗ ಆ ಮಟ್ಟಿಗೆ ನಮ್ಮನ್ನು ಆವರಿಸಿಕೊಂಡಿವೆ!

ಇಂದು ಅತಿಹೆಚ್ಚು ಬಳಕೆಯಾಗುತ್ತಿರುವ ಔಷಧಗಳಲ್ಲಿ ಆ್ಯಂಟಿಬಯೊಟಿಕ್ಸ್ (ಪ್ರತಿಜೈವಿಕಗಳು) ಕೂಡ ಸೇರಿವೆ. ಅಪಾಯಕಾರಿಯಾದ ಬ್ಯಾಕ್ಟೀರಿಯಾಗಳ ಸೋಂಕನ್ನು ನಿವಾರಿಸಲು ಈ ಪ್ರತಿಜೈವಿಕಗಳನ್ನು ಬಳಸಲಾಗುತ್ತದೆ. ದುರದೃಷ್ಟದ ಸಂಗತಿ ಎಂದರೆ, ಅತಿಹೆಚ್ಚು ದುರ್ಬಳಕೆಯಾಗುತ್ತಿರುವ ಔಷಧಗಳ ಯಾದಿಯಲ್ಲೂ ಇವು ಸೇರಿವೆ. ವೈದ್ಯರು, ಔಷಧ ವ್ಯಾಪಾರಿಗಳು, ಜನಸಾಮಾನ್ಯರು ಎಲ್ಲರೂ ಇದಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಕಾರಣರು.

ಈ ಜೀವರಕ್ಷಕ ಔಷಧಗಳ ಅತಿಬಳಕೆ ಅಥವಾ ದುರ್ಬಳಕೆಯು ಕಳವಳಕ್ಕೂ ಕಾರಣವಾಗಿದೆ. ವಿವೇಚನೆ ಇಲ್ಲದೆ ಬಳಸುತ್ತಿರುವುದರ ಪರಿಣಾಮವಾಗಿ ಪ್ರತಿಜೈವಿಕಗಳಿಗೆ ಬ್ಯಾಕ್ಟೀರಿಯಾಗಳು ನಿರೋಧಕಶಕ್ತಿಯನ್ನು ಬೆಳೆಸಿಕೊಂಡಿರುವುದು ಮತ್ತು ಬೆಳೆಸಿಕೊಳ್ಳುತ್ತಿರುವುದು ಬಹಳ ದೊಡ್ಡ ಮಟ್ಟದಲ್ಲಿ ಆರೋಗ್ಯ ಸಮಸ್ಯೆಯಾಗಿ ಪರಿಣಮಿಸಿದೆ. ಈ ಸಮಸ್ಯೆ ಬರೀ ಭಾರತಕ್ಕೆ ಸೀಮಿತವಾದುದಲ್ಲ. ಜಾಗತಿಕ ಸಮಸ್ಯೆಯಾಗಿದೆ.

ಆ್ಯಂಟಿಬಯೊಟಿಕ್ಸ್ ಬಳಕೆಯ ವಿಚಾರವಾಗಿ ಆರೋಗ್ಯಸೇವೆಗಳ ಮಹಾನಿರ್ದೇಶನಾಲಯವು (ಡಿಜಿಎಚ್‌ಎಸ್) ವೈದ್ಯರು ಮತ್ತು ಔಷಧಾಲಯಗಳ ನಿರ್ವಾಹಕರಿಗೆ ಮಾರ್ಗಸೂಚಿಯನ್ನು ನೀಡಿದೆ. ಆ್ಯಂಟಿಬಯೊಟಿಕ್ಸ್ ಸೇರಿದಂತೆ 'ಸೂಕ್ಷ್ಮಾಣು ನಿರೋಧಕ' ಔಷಧಗಳನ್ನು ತೆಗೆದುಕೊಳ್ಳುವಂತೆ ಸೂಚಿಸುವಾಗ ವೈದ್ಯರು ಸಂಬಂಧಪಟ್ಟ 'ಲಕ್ಷಣಗಳನ್ನು, ಕಾರಣಗಳನ್ನು ಹಾಗೂ ಸಮರ್ಥನೆಗಳನ್ನು' ಉಲ್ಲೇಖಿಸಬೇಕು ಎಂದು ಅದು ಹೇಳಿದೆ. ವೈದ್ಯರ ಶಿಫಾರಸು ಇದ್ದಾಗ ಮಾತ್ರ ಪ್ರತಿಜೈವಿಕಗಳನ್ನು ಮಾರಾಟ ಮಾಡಬೇಕು ಎಂದು ಔಷಧಾಲಯ ನಿರ್ವಾಹಕರಿಗೆ ಸೂಚಿಸಿದೆ. ಈ ಮಾರ್ಗಸೂಚಿಯು ಪ್ರತಿಜೈವಿಕಗಳ ಬಳಕೆಯನ್ನು ನಿಯಂತ್ರಿಸಲು ಕೊಂಚ ಮಟ್ಟಿಗಾದರೂ ನೆರವಾಗಬಹುದು. ಆದರೆ ಅದು ಪರಿಣಾಮಕಾರಿಯಾಗಿ ಜಾರಿ ಆಗುವಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ ಮೇಲಿದೆ.

ಮಾರ್ಗಸೂಚಿಯಲ್ಲಿ ಇರುವ ಸೂಕ್ಷ್ಮಾಣು ನಿರೋಧಕ ಔಷಧಗಳ ಪಟ್ಟಿಯಲ್ಲಿ ಪ್ರತಿಜೈವಿಕಗಳು, ವೈರಾಣು ನಿರೋಧಕ ಔಷಧಗಳು, ಶಿಲೀಂಧ್ರ ನಿರೋಧಕಗಳು ಸೇರಿದಂತೆ ಕೆಲವು ವರ್ಗಗಳಿಗೆ ಸೇರಿದ ಔಷಧಗಳು ಇವೆ. ವೈದ್ಯರ ಶಿಫಾರಸು ಇಲ್ಲದೆ ಇವುಗಳನ್ನು ಮಾರಾಟ ಮಾಡುವಂತೆ ಇಲ್ಲ ಎಂದು ನಿಯಮ ಹೇಳುತ್ತದೆ. ಆದರೆ, ಈ ನಿಯಮಗಳು ಕಟ್ಟುನಿಟ್ಟಾಗಿ ಪಾಲನೆ ಆಗುತ್ತಿಲ್ಲ. ನಿಯಮಗಳ ಬಗ್ಗೆ ಜನಸಾಮಾನ್ಯರಲ್ಲಿ ಹೆಚ್ಚಿನ ಅರಿವು ಕೂಡ ಇದ್ದಂತಿಲ್ಲ. ಇದರಿಂದಾಗಿ, ಪ್ರತಿಜೈವಿಕಗಳ ಅನಿಯಂತ್ರಿತ ಬಳಕೆಯ ಅಪಾಯವು ದಿನೇ ದಿನೇ ಹೆಚ್ಚಾಗತೊಡಗಿದೆ. ಈ ಔಷಧಗಳನ್ನು ವೈದ್ಯರ ಶಿಫಾರಸು ಕೂಡ ಇಲ್ಲದೆ ಔಷಧಾಲಯಗಳಲ್ಲಿ ಹಾಗೇ ಮಾರಾಟ ಮಾಡುವುದೂ ಇದೆ.

ಪ್ರತಿಜೈವಿಕಗಳ ಬಳಕೆಯಿಂದ ಪ್ಲೇಗ್, ಕ್ಷಯದಂಥ ಅನೇಕ ರೋಗಗಳನ್ನು ಬಹುಮಟ್ಟಿಗೆ ನಿಯಂತ್ರಿಸುವುದಕ್ಕೆ, ಆ ಮೂಲಕ ಕೋಟಿಗಟ್ಟಲೆ ಜನರ ಜೀವ ಉಳಿಸುವುದಕ್ಕೆ ಸಾಧ್ಯವಾಯಿತು. ಇಂತಹ ಜೀವರಕ್ಷಕ ಔಷಧಗಳನ್ನು ಅತಿಯಾಗಿ ಹಾಗೂ ವಿವೇಚನೆ ಇಲ್ಲದೆ ಬಳಸಿದರೆ, ರೋಗಕಾರಕಗಳು ಅವುಗಳಿಗೆ ನಿರೋಧಕ ಶಕ್ತಿಯನ್ನು ಬೆಳೆಸಿಕೊಳ್ಳುತ್ತವೆ. ಬಳಕೆಯಲ್ಲಿ ಇರುವ ಪ್ರತಿಜೈವಿಕಗಳ ಸಂಖ್ಯೆ ಸೀಮಿತ. ಇವು ತಮ್ಮ ಪರಿಣಾಮವನ್ನು ಕಳೆದುಕೊಂಡಲ್ಲಿ ಹಲವು ಬಗೆಯ ಕಾಯಿಲೆಗಳಿಗೆ ಮದ್ದು ಇರುವುದೇ ಇಲ್ಲ. ಈ ಅಪಾಯವನ್ನು ವೈದ್ಯರು, ಔಷಧಾಲಯಗಳ ನಿರ್ವಾಹಕರು ಮತ್ತು ಜನಸಾಮಾನ್ಯರು ಅರಿಯಬೇಕಾದ ಜರೂರು ಇದೆ. 2019ರಲ್ಲಿ ವಿಶ್ವದಲ್ಲಿ ಸಂಭವಿಸಿದ 12.7 ಲಕ್ಷ ಜನರ ಸಾವಿಗೆ ರೋಗಕಾರಕಗಳು ಬೆಳೆಸಿಕೊಂಡ ನಿರೋಧಕಶಕ್ತಿಯೇ ನೇರ ಕಾರಣ ಎಂದು ಅಂದಾಜಿಸಲಾಗಿದೆ. ಇದು ಎಲ್ಲರಿಗೂ ಎಚ್ಚರಿಕೆಯ ಗಂಟೆ.

ಪ್ರತಿಜೈವಿಕಗಳಿಗೆ ರೋಗಕಾರಕಗಳು ನಿರೋಧಕ ಶಕ್ತಿಯನ್ನು ಬೆಳೆಸಿಕೊಂಡರೆ, ರೋಗಶಮನವು ನಿಧಾನವಾಗುತ್ತದೆ ಹಾಗೂ ರೋಗಿಯು ಸಾಯುವ ಸಾಧ್ಯತೆ ಹೆಚ್ಚಿರುತ್ತದೆ ಎಂದು ಮಹಾನಿರ್ದೇಶನಾಲಯವು ಎಚ್ಚರಿಸಿದೆ. ಪ್ರತಿಜೈವಿಕಗಳ ಅತಿಯಾದ ಬಳಕೆಯ ಅಪಾಯಗಳ ಬಗ್ಗೆ ಜನರಲ್ಲಿ ತಿಳಿವಳಿಕೆ ಮೂಡಿಸುವ ಕೆಲಸ ವ್ಯಾಪಕವಾಗಿ ಆಗಬೇಕು. ವೈದ್ಯರ ಬಳಿ ಹೋದಾಗ ಅವರು ಬರೆದುಕೊಟ್ಟ ಔಷಧಗಳ ಬಗ್ಗೆ ವಿವರಗಳನ್ನು ಕೇಳಿ ಪಡೆಯುವಂತೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಔಷಧಗಳ ಅಡ್ಡಪರಿಣಾಮಗಳ ಬಗೆಗೂ ಅವರು ಅರಿಯುವಂತಾಗಬೇಕು. ಆಗ ಮಿತವಾಗಿ ಮತ್ತು ವಿವೇಚನಾಯುತವಾಗಿ ಅವುಗಳ ಬಳಕೆ ಸಾಧ್ಯವಾಗುತ್ತದೆ.

ನಮ್ಮ ಆರೋಗ್ಯ ಸೇವಾ ವಲಯದ ನ್ಯೂನತೆಗಳು ಲೆಕ್ಕವಿಲ್ಲದಷ್ಟು. ಆದರೆ ಕಾಯಿಲೆಗಳು ಹೊಸ ಹೊಸ ರೂಪ ತಾಳಿ ಜನರನ್ನು ಬೆದರಿಸುತ್ತಿವೆ. ಆ ಪಟ್ಟಿಗೆ ಮತ್ತೊಂದು ದೊಡ್ಡ ಸಮಸ್ಯೆ ಸೇರಿಕೊಳ್ಳದಂತೆ ಎಚ್ಚರ ವಹಿಸಬೇಕಾದ ಅನಿವಾರ್ಯ ನಮ್ಮ ಎದುರಿಗಿದೆ. ಜೀವರಕ್ಷಕ ಔಷಧಗಳ ರಕ್ಷಾಕವಚ ಛಿದ್ರವಾಗದಂತೆ ನೋಡಿಕೊಳ್ಳೋಣ.

■ ಎನ್. ಉದಯಕುಮಾರ್



ಈಶ್ವರ್